

# ಮಲೇಷ್ಯಾ ನೆಲದ 'ಎತ್ತರ'ದ ಹಂಬಲಿಕೆ

ಹಲವು ಆಕರ್ಷಣೆಗಳನ್ನು ತನ್ನಲ್ಲಿಟ್ಟುಕೊಂಡಿರುವ ಮಲೇಷ್ಯಾ, ಸುಂದರ ಕಟ್ಟಡಗಳಿಂದ ಮಾತ್ರವಲ್ಲ, ಸಂಸ್ಕೃತಿಯ ವೈವಿಧ್ಯದಿಂದಲೂ ವಿಶೇಷ ಎನಿಸಿಕೊಳ್ಳುತ್ತದೆ. ಜಗತ್ತಿನಲ್ಲೇ ಅತಿ 'ಎತ್ತರ'ಕ್ಕೇರುವ ತನ್ನ ಅಭಿಲಾಷೆಯನ್ನು ಹಲವು ರೀತಿಗಳಲ್ಲಿ ವ್ಯಕ್ತಪಡಿಸಿದೆ. 'ಏರಿದವನು ಚಿಕ್ಕವನಿರಬೇಕೆಲೆ ಎಂಬಾ ಮಾತನು ಸಾರುವನು' ಎನ್ನುವ ಮಾತು ಮಲೇಷ್ಯಾಕ್ಕೆ ಅನ್ವಯಿಸುವುದಿಲ್ಲ.

■ ವಸಂತ ಹೊಸಬೆಟ್ಟು

ಆಕಾಶದೆಡೆಗೆ ಹೂಡಿದ ಬಾಣಗಳಂತೆ ಕಾಣುವ ಎತ್ತರೆತ್ತರ ಕಟ್ಟಡಗಳು... ಹಗಲು ಕರಗುತ್ತಿದ್ದಂತೆ ಲಕ್ಷಾಂತರ ದೀಪಗಳ ಬೆಳಕಿನಲ್ಲಿ ಝಗಮಗಿಸುತ್ತಾ ಫ್ಯಾಂಟಸಿ ಲೋಕವೇ ಸೃಷ್ಟಿಯಾಗಿಬಿಡುವ ಬೆರಗು ಕಾಣಬೇಕೆಂದರೆ ಇಲ್ಲಿಗೆ ಬರಲೇಬೇಕು.

ಈ ಹೊಸ ವರ್ಷದಲ್ಲಿ ಮಲೇಷ್ಯಾಗೆ ಹೋಗಬೇಕೆಂಬ ಯೋಜನೆ ಹಾಕಿಕೊಂಡು, ಮೊದಲ ವಾರವೇ ನಾವು 131 ಸಹೋದ್ಯೋಗಿಗಳು ಕೂಡಿ ಪ್ರವಾಸಕ್ಕೆ ಹೊರಟುನಿಂತೆವು. ಅತಿ ಉತ್ಸಾಹದೊಂದಿಗೆ ಮಲೇಷ್ಯಾ ಬೆನ್ನತ್ತಿದ್ದೆವು.

ಎಲ್ಲಿ ನೋಡಿದರಲ್ಲಿ ದೊಡ್ಡ ದೊಡ್ಡ ಕಟ್ಟಡಗಳದ್ದೇ ಚಿತ್ರಣ. ಪೈಪೋಟಿಗೆ ಬಿದ್ದಂತೆ ಮೇಲೇರುತ್ತಿರುವ ಗಗನಚುಂಬಿ ಕಟ್ಟಡಗಳು ದೇಶವನ್ನು ಆಧುನಿಕತೆಯತ್ತ ಮುನ್ನಡೆಸುತ್ತಿರುವ ವಾಹಕಗಳಂತೆಯೇ ಕಂಡವು. ಬೃಹತ್ ಕಟ್ಟಡಗಳ ನಿರ್ಮಾಣದಲ್ಲಿ ಈ ದೇಶಕ್ಕೆ ಯಾಕೆ ಈ ಪರಿಯ ಮುತುವರ್ಜಿ? ಆಗಸದೆತ್ತರಕ್ಕೇರುವ ದೇಶದ ಆಕಾಂಕ್ಷೆಯ ಪ್ರತಿರೂಪಗಳೇ ಈ ಕಟ್ಟಡಗಳಿರಬಹುದೇ?.

ಮಲೇಷ್ಯಾದ ಕೌಲಾಲಂಪುರಕ್ಕೆ ಬಂದಿಳಿಯುತ್ತಿದ್ದಂತೆ ಕಣ್ಣು ಕಟ್ಟಿದ ಪ್ರಶ್ನೆಗಳಿವು. ಮಲೇಷ್ಯಾದ ಸುಂದರ ರಾಜಧಾನಿ ಕೌಲಾಲಂಪುರಕ್ಕೆ ಬಂದ ಯಾರಿಗಾದರೂ ಇಂಥ ಪ್ರಶ್ನೆಗಳು ಏಳುವುದು ಸಹಜವೇ.

ಈ ಪ್ರಶ್ನೆಗೆ ನಮ್ಮ ಜೊತೆ ಬಂದಿದ್ದ ಪ್ರವಾಸಿ ಮಾರ್ಗದರ್ಶಕಿ ಶುಭಾ ಅವರ ಉತ್ತರವೂ ಆಸಕ್ತಿದಾಯಕ ಎನಿಸಿತು. 'ನಮ್ಮದು ಗಟ್ಟಿ ನೆಲ. ನಮ್ಮ ನೆರೆ ದೇಶಗಳಲ್ಲಿರುವ ಭೂಕಂಪ, ಜ್ವಾಲಾಮುಖಿ, ಸುನಾಮಿಯಂತಹ ನೈಸರ್ಗಿಕ ವಿಪತ್ತುಗಳು ನಮ್ಮಲ್ಲಿಲ್ಲ. ಹೀಗಾಗಿ ಇಲ್ಲಿ ಇಂಥ ಗಗನಚುಂಬಿ ಕಟ್ಟಡಗಳನ್ನು ಕಟ್ಟುವುದರಲ್ಲಿ ನಮಗೆ ಹೆಚ್ಚೇ ಹುಮ್ಮಸ್ಸು' ಎಂದು ಹೆಮ್ಮೆಯಿಂದ ಹೇಳಿಕೊಂಡರು.

ಮಾರ್ಗದರ್ಶಕಿಯ ಮಾತಿಗೆ ಬೆರಗಾಗಿ ಮಲೇಷ್ಯಾ ಬಗ್ಗೆ ಹೆಚ್ಚು ಮಾಹಿತಿ ಕಲೆಹಾಕುತ್ತಾ ಸಾಗಿದ್ದೆವು.